ಹಾಸನ ಡಿಸ್ಟ್ರಿಕ್ಟ್.

ಬೇಲೂರು ತಾಲ್ಲೂಕು.

ಇಸ್ತಿಹಾರ್‌ನಾಮಾ.

ತಾರೀಖು 11ನೇ ಡಿಸೆಂಬರ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಕರಗೂರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ 1896ನೇ ಇಸವಿ ಫಿಬ್ರವರಿ ತಾರೀಖು 17ನೇ ಸೋಮವಾರ ಹಗಲು 11 ಘಂಟೆಗೆ ಹಾಸನ ಡೆಪ್ಯುಟಿ ಕಮ್ಮಿಷನರ್ ಹಾಜೇಬರವರ ಮುಂಜೂರಾತಿಗೆ ವಳಪಡಿಸಿ ಬೇಲೂರು ತಾಲ್ಲೂಕು ಅಮಲ್‌ದಾರ್ ರೂಬರೂ ಬೇಲೂರು ಮೊಕ್ತಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ (25) ರೂಪಾಯಿಗಳ ಮೇರೆ ಆಗುವ ಅಸ್ಸೆಸ್ಟೆಡ್ ಟೈಸ್ ಯಾನೆ ನಿಯಮವಾದ ಸರ್ಕಾರ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡಿದ ಆಖೈರ್ ಜಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ ಸವಾಲ್ ಮೊಬಲಗು (ಅಸ್ಸೆಸ್ಟೆಡ್ ಟೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಕೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಸ್ಸೆಸ್ಟೆಡ್ ಟೈಸ್ ಯಾನೆ ನಿಯಮವಾದ ಸರಕಾರ ಸವಾಲ್ ಮೊಬಲಗಿನಲ್ಲಿ ಸರ್ವೇ ಖರ್ಚು ನೊಬಲಗು ಮತ್ತು ಸರಕಾರಕ್ಕೆ ನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಖುಷಿಯಲ್ಲಾ ಮನ್ನಾಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಕೇಕಡ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಜಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಜಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಜಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷರೂ ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಫ ಪೂರಾ ಆಕಾರ ಈ ವೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯ್ತತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಬ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಲೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನಿಂತೆ ಬರಹ ಮೂಲಕವಾಗಿ ಹರಾಜು ದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೇ ನಂಬರ್.	ದರಖಾಸ್ತುದಾರನ ಹೆಸರು.	ಜಮೀ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ.		ಷರಾ.
				ನಿಸ್ವಾರ್ಥ.	ಆಕಾರ.	
83	ಕೋಗೋಜು ನಂಜುಂಡಯ್ಯನವರು, ಹಾಸನದಲ್ಲಿರುವ ಹಾಜಿ ಗಾಸ್ಟೊ ಹರ್ದೇಕರೀಸ್ ಸಾಬು.	ಅಲೇಹಳ್ಳಿ ಕರಗೂರು ಗ್ರಾಮ.	ಪೂರ್ವ ಪಶ್ಚಿಮ ಸರ್ವೇ ನಂಬರು 82 ಪಾಲು ಪೋಡು ನಂ ಬರು 129 ಪಶ್ಚಿಮ ಸರ್ವೇ 44 ಗ್ರಾಮ.	ಎಕರೆ 70 ಗುಂಟೆ 32		

ತಿಳುವಳಿಕೆ ಷರಾ,—ಬಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಸ್ಸೆಸ್ಟೆಡ್ ವಸೂಲಾದ್ದರಲ್ಲಿ ಕರಾರುವಾಕ್ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತಿ ಎಕರೆ ಸಂಬಂಧ ಅಸ್ಸೆಸ್ಟೆಡ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀ ಹಿಡುವಳೀ ದಾರನು ಬದ್ಧವ ಅರ್ಹನಾಗಿರಬೇಕು.

ನೋಟಿಫಿಕೇರ್ಷ.

ತಾರೀಖು 17ನೇ ಡಿಸೆಂಬರ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಅರಸೀಕರೆ ತಾಲ್ಲೂಕು ಬಾಣಾವಾರದ ಹೋಬಳಿ ಬೇಚಿರಾಖ ಚಿಕ್ಕ ಬಾಣಾವಾರ ಗ್ರಾಮದಲ್ಲಿ 146 ರೂಪಾಯಿ ಆಕಾರವುಳ್ಳ 196 ಎಕರೆ 32 ಗುಂಟೆ ಜಮೀನನ್ನು ಪೂರಾ ಆಕಾರಕ್ಕೆ ಸಾಗುವಳಿಗೆ ಹರಾಜಿಲ್ಲದೆ ಕೊಡಿಸಬೇಕು ಯಂತ ಬಾಣಾವಾರದಲ್ಲಿರುವ ಜನವಗಲ್ಲು ವೆಂಕಟೇಶಯ್ಯ ದರಖಾಸ್ತು ಮಾಡಿದ್ದಾನೆ.

ಈ ಜಮೀನುಗಳಲ್ಲಿ 540 ದೊಡ್ಡ ಕೆಂದೀ ಮರಗಳು 543 ಈಚಲುಗುಂಬ ಸೊಸಿಗಳು 872 ಈಚಲು ಸಂಣ ಸೊಸಿಗಳು 6 ಇತರ ಜಾತಿ ಮರಗಳು ಇರುವಂತೆಯೂ ಇವುಗಳಿಗೆ ಒಟ್ಟು ರೂ. 522–6—0 ಕಿಮ್ಮತ್ತು ಆಗುವದಾಗಿ ತಿಳಿಯಬರುತ್ತೆ. ಈ ಜಮೀನುಗಳನ್ನು ಮಾಲ್‌ಕಿ ಹರಾಜ್ ಇಲ್ಲದೇನೇ ತನಿಗೆ ಕೊಡಿಸಬೇಕು. ಹಾಗೆ ಕೊಟ್ಟದ್ದೇ ಆದರೆ ಜಮೀನು ಸ್ವಾಧೀನವಾದ ಲಾಗಾಯತು ಬಂದಾ ವರುಷದಲ್ಲಿ (10) ವಕ್ಕಲು ಇರಲು ತಕ್ಕ ಮನೆಗಳನ್ನು ಕಟ್ಟಿ ವಕ್ಕಲನ್ನು ತಂದು ಇಟ್ಟು ಗ್ರಾಮ ಆಬಾದು ಮಾಡುವದಾಗಿಯೂ, ಮೇಲ್ಕಂಡ ವಾಯಿದೆ ಒಳಗೆ ಗ್ರಾಮ ಆಬಾದು ಮಾಡಲು ಖಾತರಿ ಬಗ್ಗೆ ಎಂದನೂರು ರೂಪಾಯಿಗಳನ್ನು ಹಾಜರ್ಮಾಡುವದಾಗಿಯೂ, ವಾಯಿದೆ ಅಂದರ್‌ವಾರ್ ಗ್ರಾಮಕಟ್ಟಿ 10 ವಕ್ಕಲು ತಂದು ಇಡಲು ತಪ್ಪಿದರೆ ಡಿಪಾಜಿಟ್ ಇಡುವ ಸೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಬಹುದೆಂದು ದರಖಾಸ್ತುದಾರ ಬರ್ಯಾ ಮಾಡುತ್ತಾನೆ. ಈ ದರಖಾಸ್ತುದಾರನ ಸವಾಲಿಗಿಂತ ಸರಕಾರಕ್ಕೆ ಫಾಯಿದೆ ಮತ್ತು ಅನುಕೂಲವಾದ ಸವಾಲ ಮಾಡಿ ಜಮೀನು ಪಡಿಯಲು ಇಚ್ಛೈಯುಳ್ಳವರು ಈ ಇಸ್ತಿಹಾರ ಹುಟ್ಟಿದ ತಾರೀಖು ಲಾಗಾಯತು 3 ತಿಂಗಳೊಳಗೆ ಅರಸೀಕೆರೆ ತಾಲ್ಲೂಕು ಅಮಲ್‌ದಾರ್‌ರಲ್ಲಿ ದರಖಾಸ್ತು ಮಾಡಬಹುದು.

ಈ ಮೇರೆ ಹಾಲಿ ಬಂದಿರುವ ದರಖಾಸ್ತಿಗಿಂತ ಅನುಕೂಲವಾದ ಸವಾಲುಗಳು ಮೇಲ್ಕಂಡ 3 ತಿಂಗಳೊಳಗಾಗಿ ಬಾರದೆ ಇದ್ದರೆ ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸಿನ XXನೇ ರೂಲ್ 18ನೇ ಪ್ಯಾರಾ ಪ್ರಕಾರ ದರಖಾಸ್ತುಗಳು ಅವುಗಳ ಯೋಗ್ಯತಾನುಸಾರವಾಗಿ ಫೈನಲ್ಯಾಡಲ್ಪಡುವವು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ತಾರೀಖು 6ನೇ ಜನವರಿ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ಯ 1878ನೇ ಇಸವಿ 8ನೇ ಜೂ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಬಾಬತು ಈ ಕೆಳಗೆ ಕಾಣಿಸಿರುವ ಸ್ಟೇಟ್ ಫಾರೆಸ್ಟ್‌ಗಳು, ಪ್ರೈವೇಟ್‌ಪರ್ಷ್‌ಗಳು, ಮತ್ತು ಸಂದಲ್ ರಿಜರ್ವ್‌ಗಳು ಫಿಕಾರಿ ಬೇಟೆ ಮುಂತಾದವುಗಳಿಗೆ ಅವಕಾಶವಿಲ್ಲದ ರೀತಿ 1896ನೇ ಇಸವಿ ಜನವರಿ 15ರ ಲಾಗಾಯತು ಮೇ ಆಖೈರ್ ವರಿಗೆ ಬಂದ್ ಮಾಡಿ ಬೆಂಕಿ ವುಸ್ತುವಾರಿ ಬಗ್ಗೆ ಕಾವಾಡಲ್ಪಡುತ್ತೆ.

ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನು ಕ್ರಮವಾಗಿ ಪ್ರಾಸಿಕ್ಯೂಟ್ ಮಾಡಲ್ಪಡುತ್ತೆ.

ಜಂಜರ್ ನಂ ಬರ್.	ತಾಲ್ಲೂಕು ಹೆಸರು.	ಫಾರೆಸ್ಟ್ ವ ಪ್ರೈವೇಟ್‌ಪರ್ಷ್‌ಗಳ ಹೆಸರು.
1	ತರೀಕೆರೆ ಮತ್ತು ಎಡೆಹಳ್ಳಿ ಸಬ್ ತಾಲ್ಲೂಕು	ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ ಮತ್ತು ಟೀಕ್ ಪ್ರೈವೇಟ್‌ಪರ್ಷ್
2	ಕೊಪ್ಪ	ತೇಗೂರಗುಡ್ಡ ಸ್ಟೇಟ್ ಫಾರೆಸ್ಟ್
3	ಚಿಕ್ಕಮಗಳೂರು	ಬಸವನಕೋಟೆ ಫಾರೆಸ್ಟ್
4	ಡಿಟೋ	ಮುತ್ತೋಡಿ ಸ್ಟೇಟ್ ಫಾರೆಸ್ಟ್
5	ಡಿಟೋ	ಕಳಗಣಿ ಸಂದಲ್ ರಿಜರ್ವ್
6	ಡಿಟೋ	ಮತ್ತಾವಾರ ಡಿಟೋ
7	ಕೊಪ್ಪ	ಹೆಬ್ಬೆ ಟೀಕ್ ಪ್ರೈವೇಟ್‌ಪರ್ಷ್
8	ಕಡೂರು	ಯಮ್ಮೇದೊಡ್ಡಿ ಸಂದಲ್ ಪ್ರೈವೇಟ್‌ಪರ್ಷ್
9	ತರೀಕೆರೆ	ಶಂಕರಗಟ್ಟ ಸಂದಲ್ ಪ್ರೈವೇಟ್‌ಪರ್ಷ್
10	ಕಡೂರು	ಬುಕ್ಕಸಾಗರ ಪ್ರೈವೇಟ್‌ಪರ್ಷ್
11	ಚಿಕ್ಕಮಗಳೂರು	ಹಂಗಾಜನಹಳ್ಳಿ ಸಂದಲ್ ರಿಜರ್ವ್
12	ಡಿಟೋ	ನೇರಡಿ ಡಿಟೋ
13	ಕೊಪ್ಪ	ಕರಡಿಮಟ್ಟ ರಿಜರ್ವ್ಡ್ ಫಾರೆಸ್ಟ್

ಸಿ. ಇ. ಯಂ. ರಸಲ್,
ಡೆಪ್ಯುಟಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್.